## 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5019/2022 ಫ್ರಾಸಾ-32
ಚಾಸಾ-40

ದಿನಾಂಕಃ 03-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಮೇಶ ಜಿ. |
| **ತಂದೆಯ / ಗಂಡನ ಹೆಸರು** | ಗಂಗಣ್ಣ |
| **ವಯಸ್ಸು** | 31 |
| **ಉದ್ಯೋಗ** | ಸಿ.ಪಿ.ಸಿ-615 ಮಿಡಿಗೇಶಿ ಪೊಲೀಸ್ ಠಾಣೆ |
| **ವಾಸಸ್ಥಳ** | ಮಿಡಿಗೇಶಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಾನು 2016 ನವಂಬರ್ ರಿಂದ 2022 ಜೂನ್ ರವರೆಗೆ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 16.02.2022 ರಂದು ಈ ಕೇಸಿನ ತನಿಖಾಧಿಕಾರಿ ರವರು ಕೊರಟಗೆರೆ ಟೌನ್ ಸಜ್ಜನರ ಬೀದಿಯಲ್ಲಿರುವ ಸುಮಿತ್ರಮ್ಮ ರವರ ಮನೆಯಲ್ಲಿ ಪಂಚನಾಮೆ ಮಾಡಬೇಕಾಗಿದೆ ಲ್ಯಾಪ್ ಟಾಪ್ ಮತ್ತು ಪ್ರಿಂಟರ್ ತೆಗೆದುಕೊಂಡು ಬರುವಂತೆ ಹೇಳಿದ್ದು ಅದರಂತೆ ನಾನು ಲ್ಯಾಪ್ ಮತ್ತು ಪ್ರಿಂಟರ್ ತೆಗೆದುಕೊಂಡು ನಾನು ತನಿಖಾಧಿಕಾರಿ ಜೊತೆ ಸ್ಥಳಕ್ಕೆ ಹೋಗಿದ್ದು. ನಮ್ಮ ಜೊತೆ ಪ್ರಕರಣದ ಆರೋಪಿತರಾದ ಶೈಲಜಾ ಮತ್ತು ಪುನಿತ್ ರವರ ಬೆಂಗಾವಲಾಗಿ ಚಾಸಾ-36 ಮತ್ತು ಚಾಸಾ-31 ರವರು ಸೇರಿ ಅಷ್ಟು ಜನ ಸೇರಿ ಇಲಾಖಾ ಜೀಪಿನಲ್ಲಿ ಸುಮಿತ್ರ ರವರ ಮನೆಗೆ ಹೋಗಿದ್ದು ಅಲ್ಲಿ ಆರೋಪಿತರಿಬ್ಬರು ಸಮಿತ್ರಮ್ಮ ರವರ ಕೊಲೆ ಮಾಡಿದ ಜಾಗ ತೋರಿಸಿದ್ದು ಆ ಸಮಯದಲ್ಲಿ ಪಂಚರಾಗಿ ಚಾಸಾ-12 ಮತ್ತು 13 ರವರು ಹಾಜರಿದ್ದು. ತನಿಖಾಧಿಕಾರಿ ಹೇಳಿದಂತೆ ನಾನು ಲ್ಯಾಪ್ ಟಾಪ್ ನಲ್ಲಿ ಮಹಜರನ್ನು ಬೆರಳಚ್ಚು ಮಾಡಿರುತ್ತೇನೆ. ಸದರಿ ಮಹಜರನ್ನು

ಮಧ್ಯಾಹ್ನ 1-15 ರಿಂದ 2-15 ರವರೆಗೂ ಮಾಡಿರುತ್ತಾರೆ. ಈ ಬಗ್ಗೆ ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ. ನಿಪಿ-8 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನಿಪಿ-8 ರ ಕಾಲಕ್ಕೆ ಪೊಟೋ ತೆಗೆದಿರುತ್ತಾರೆ. ನಿಪಿ-9 ರಿಂದ 11 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-10 ಮತ್ತು 11 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಕೊರಟಗೆರೆ ಟೌನ್ ಮಲ್ಲೇಶ್ವರ ರಸ್ತೆಯಲ್ಲಿರುವ ಸ್ಮಶಾನಕ್ಕೆ ಆರೋಪಿತರನ್ನು ಕರೆದುಕೊಂಡು ಎಲ್ಲರೂ ಹೋಗಿದ್ದು ಅಲ್ಲಿಗೆ ಚಾಸಾ-15 ಮತ್ತು 16 ರವರು ಹಾಜರಿದ್ದು ಅಲ್ಲಿ ಸುಮಿತ್ರಮ್ಮ ರವರ ಹೂತಿದ್ದ ಜಾಗವನ್ನು ಆರೋಪಿತರು ತೋರಿಸಿದ್ದು ತನಿಖಾಧಿಕಾರಿಗಳು ಸದರಿ ಜಾಗವನ್ನು ಪರಶೀಲನೆ ಮಾಡಿ ನನಗೆ ಹೇಳಿದ್ದು ನಾನು ಅದರಂತೆ ಬೆರಳಚ್ಚು ಮಾಡಿರುತ್ತೇನೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಇ) ಎಂದು ಗುರುತಿಸಲಾಯಿತು. ನಿಪಿ-2 ರ ಕಾಲಕ್ಕೆ ಪೊಟೋ ತೆಗೆದಿರುತ್ತಾರೆ, ನಿಪಿ-3 ಪೊಟೋ ನೋಡಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ನಾನು ಬೆರಳಚ್ಚು ಮಾಡಿ ಪ್ರಿಂಟ್ ತೆಗೆದ ಬಗ್ಗೆ ಸರ್ಟಿಪಿಕೇಟ್ ಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ಕಲಂ 65(ಬಿ) ದೃಢೀಕರಣ ಪತ್ರವನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಕಲಂ 65(ಬಿ) ದೃಢೀಕರಣ ಪತ್ರವನ್ನು ನಿಪಿ-45 ಎಂದು, ಸಾಕ್ಷಿ ಸಹಿಯನ್ನು ನಿಪಿ-45(ಎ) ಎಂದು ಗುರುತಿಸಲಾಯಿತು. ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಶ್ರೀ. ಎಂ.ಎಂ. ವಕೀಲರಿಂದ ಆರೋಪಿ ಪರವಾಗಿಃ-</u>**

ನಾನು ಘಟನಾ ಸ್ಥಳದಲ್ಲಿ ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡುವುದನ್ನು ಮತ್ತು ಪ್ರಿಂಟ್ ನಿಂದ ಪ್ರಿಂಟ್ ತೆಗೆಯುವುದರ ಪೊಟೋ ತೆಗೆದಿರುವುದಿಲ್ಲ. ಘಟನಾ ಸ್ಥಳದಲ್ಲಿ ಬೆರಳಚ್ಚು ಮಾಡಿರುವುದಿಲ್ಲ , ಠಾಣೆಯಲ್ಲಿ ಬೆರಳಚ್ಚು ಮಾಡಿ ಪ್ರಿಂಟ್ ತೆಗೆದಿರುತ್ತೇನೆ ಎಂದರೆ ಸರಿಯಲ್ಲ. ಮಲ್ಲೇಶ್ವರ ಸ್ಮಶಾನಕ್ಕೆ ಹೋಗಿರುವುದಿಲ್ಲ , ಮತ್ತು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿ ಪ್ರಿಂಟ್ ತೆಗೆದಿರುವುದಿಲ್ಲ ಠಾಣೆಯಲ್ಲಿ ಬೆರಳಚ್ಚು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಪಂಚರಿಗೆ ನೋಟೀಸು ಕೊಟ್ಟಿದ್ದರೋ ಅಥವಾ ಮೌಖಿಕವಾಗಿ ಹೇಳಿದ್ದರ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಕೊಟ್ಟಿರುವ ಕಲಂ 65(ಬಿ) ದೃಢೀಕರಣ ಪತ್ರ ಕಾನೂನು ರೀತ್ಯಾ ಸರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪೊಟೋಗಳು ಘಟನಾ ಸ್ಥಳದಲ್ಲಿ ತೆಗೆದ ಪೊಟೋಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಘಟನೆ ಬಗ್ಗೆ ವಿವರಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**